


ಸರೋಜಿನಿ ಮಹಿಷಿ ಅವರೊಂದಿಗೆ ವೇದಿಕೆ ಅಧ್ಯಕ್ಷೆ ವಿನುತಾ

## ಇದು ಉದ್ಯೋಗ ವೇದಿಕೆ

'ಕನ್ನಡಿಗರ ಉದ್ಯೋಗ ವೇದಿಕೆ' ನೋಂದಾಯಿತ ಸಂಸ್ಥೆಯಾಗಿದ್ದು, ಉದ್ಯೋಗದಿಂದ ವಂಚಿತರಾಗುತ್ತಿರುವ ಕನ್ನಡದ ಉದ್ಯೋಗಾರ್ಥಿಗಳಿಗೆ ತಮ್ಮ ಉದ್ಯೋಗದ ಹಕ್ಕಿನ ಮೂಲಕ ಕರ್ನಾಟಕದಲ್ಲಿ ಉದ್ಯೋಗ ಪಡೆಯಲು ನೆರವಾಗುತ್ತಿದೆ. ಕರ್ನಾಟಕದಲ್ಲಿ ಕನ್ನಡಿಗ ಉದ್ಯೋಗ ಪಡೆಯುವುದು ಮೂಲ ಹಕ್ಕು ಎನ್ನುವುದನ್ನು ಪ್ರತಿಪಾದಿಸುತ್ತದೆ. ಕನ್ನಡಿಗರ ತಮ್ಮ ಉದ್ಯೋಗದ ಹಕ್ಕು ಹಾಗೂ ಅವಕಾಶಗಳ ಕುರಿತು ಅವರಿಗೆ ಜಾಗೃತಿ ಮೂಡಿಸುವುದು, ತಾಲ್ಲೂಕು – ಜಿಲ್ಲಾ ಮಟ್ಟದಲ್ಲಿ ಉಚಿತವಾಗಿ ಸಂದರ್ಶನ ಎದುರಿಸುವ ಬಗ್ಗೆ ತರಬೇತಿ ನೀಡುವುದು, ಇಂಗ್ಲಿಷ್ ಮಾತನಾಡುವುದನ್ನು ಕಲಿಸುವುದು, ವ್ಯಕ್ತಿತ್ವ ವಿಕಸನ ತರಗತಿಗಳನ್ನು ನಡೆಸುವುದು, ಕೌಶಲ್ಯ ತರಗತಿಗಳನ್ನು ವಿಷಯ ಪರಿಣತರ ಮೂಲಕ ನೀಡುವುದು– ಹೀಗೆ ಕನ್ನಡಿಗರ ಉದ್ಯೋಗಕ್ಕಾಗಿ ಈ ವೇದಿಕೆ ಹಮ್ಮಿಕೊಂಡಿರುವ ಕೆಲಸಗಳು ಹತ್ತಾರು.

ವೇದಿಕೆ ವೆಬ್ ವಿಳಾಸ: ttp://kannadigaraudyogavedike.org
e mail: vinutha.moola@gmail.com
ದೂರವಾಣಿ: 080 32469125, 9686399182

ಸಹಿ ಹಾಕಿದ್ದಾರೆ. ಪ್ರಕರಣದ ವಿಚಾರಣೆ ನಡೆಸಿರುವ ಹೈಕೋರ್ಟ್ ತೀರ್ಪನ್ನು ಇನ್ನೂ ಕಾಯ್ದಿರಿಸಿತ್ತು. ಅಷ್ಟರಲ್ಲಿ ವೇದಿಕೆಯೂ ಅರ್ಜಿಯನ್ನು ವಾಪಸ್ಸು ಪಡೆದುಕೊಂಡಿದೆ.

'ಕನ್ನಡಿಗರ ಉದ್ಯೋಗ ವೇದಿಕೆ' ತನ್ನ ಉದ್ದೇಶಿತ ಕಾರ್ಯ ಸಾಧನೆಗೆ ಹತ್ತಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ. ಜನಲೋಕಪಾಲ್ ಮಸೂದೆಗೆ ಸಂಬಂಧಿಸಿದಂತೆ ಅಣ್ಣಾ ಹಜಾರೆ ಹೋರಾಟವನ್ನು ಬೆಂಬಲಿಸಿದ ವೇದಿಕೆ, ಅಂತೆಯೇ ಕನ್ನಡಿಗರ ಉದ್ಯೋಗ ಹಕ್ಕು ರಕ್ಷಣೆಗಾಗಿ ಜನವರಿ 27ರಿಂದ ಫೆ.6 ರವರೆಗೆ ಹನ್ನೊಂದು ದಿನಗಳ ಕಾಲ ಉಪವಾಸ ಸತ್ಯಾಗ್ರಹವನ್ನು ನಡೆಸಿತ್ತು. ಇದರ ಜೊತೆಗೆ ಕೆಲವೊಂದು ಖಾಸಗಿ ಸಂಸ್ಥೆಗಳ ಆಡಳಿತ ಮಂಡಳಿಗಳ ಜೊತೆ ನಿರಂತರ ಚರ್ಚೆ– ವಾದ– ವಿವಾದಗಳನ್ನು ನಡೆಸುವ ಮೂಲಕ ಕನ್ನಡಿಗರಿಗೆ ಕರ್ನಾಟಕದಲ್ಲಿ ಉದ್ಯೋಗ ಕಲ್ಪಿಸುವುದು ಅತ್ಯಗತ್ಯ ಅನ್ನುವ ಅರಿವನ್ನು ಮೂಡಿಸಿ ಸಮನ್ವಯತೆ ಸಾಧಿಸುತ್ತಿದೆ.

ಇನ್‌ಸ್ಟಿಟ್ಯೂಟ್ ಆಫ್ ಬ್ಯಾಂಕಿಂಗ್ ಪರ್ಸನಲ್ ಸೆಲೆಕ್ಷನ್ (**IBPS**) ಪರೀಕ್ಷೆಯಲ್ಲಿ ಈ ಹಿಂದೆ ಹೆಚ್ಚಿನ ಪಾಲು ಅನ್ಯ ರಾಜ್ಯದವರ ಸ್ವತ್ತಾಗುತ್ತಿತ್ತು. ಅದರಲ್ಲೂ ಆಂಧ್ರದವರು ಸಿಂಹಪಾಲು ಪಡೆಯುತ್ತಿದ್ದರು. ಅದಕ್ಕೆ ಕಾರಣ ಆಂಧ್ರದ ನಂದ್ಯಾಲ ಮತ್ತು ಕರ್ನೂಲ್‌ನಲ್ಲಿ ಬ್ಯಾಂಕಿಂಗ್ ಪರೀಕ್ಷೆ ತಯಾರಿಗಾಗಿಯೇ ವಿಶೇಷ ತರಬೇತಿ ನೀಡುವ ಕೇಂದ್ರಗಳನ್ನು ತೆರೆದದ್ದು. ಅಲ್ಲಿ ತರಬೇತಿ ಪಡೆದ ಅಭ್ಯರ್ಥಿಗಳು ಬ್ಯಾಂಕ್ ಪರೀಕ್ಷೆಯಲ್ಲಿ ಆಯ್ಕೆಯಾಗುತ್ತಿದ್ದರು.

ಇದರಿಂದ ಅಸಮಾಧಾನಗೊಂಡ ವೇದಿಕೆ ಈ ವಿಷಯವನ್ನು ಬ್ಯಾಂಕಿಂಗ್ ನೇಮಕಾತಿ ನಿರ್ದೇಶಕರನ್ನು ಭೇಟಿಯಾಗಿ ಚರ್ಚಿಸಿತು. ಆ ವಿಷಯವನ್ನೇ ಇಟ್ಟುಕೊಂಡು ಮೇಲಿಂದ ಮೇಲೆ ಮೂರು ನಾಲ್ಕು ಬಾರಿ ಅವರ ಜೊತೆ ಮಾತುಕತೆ ನಡೆಸಿತು. ರಾಜ್ಯದ ವ್ಯವಹಾರ ಸ್ಥಳೀಯ ಭಾಷಿಕರಿಂದ ಸುಲಭವಾಗುತ್ತದೆ. ಸ್ಥಳೀಯ ಗ್ರಾಹಕನಿಗೆ ಆತನ ಮಾತೃಭಾಷೆಯಿಂದ ವ್ಯವಹರಿಸಿದರೆ ತೃಪ್ತಿಯಾಗುತ್ತದೆ ಎಂಬ ವೇದಿಕೆಯ ವಾದವನ್ನು ಅರ್ಥಮಾಡಿಕೊಂಡರು. ಅದಕ್ಕಾಗಿ ಅವರು ಪರೀಕ್ಷೆಯಲ್ಲಿ ಕನ್ನಡ ಪ್ರಬಂಧದ ಪ್ರಶ್ನೆಯನ್ನೂ ಸೇರಿಸಿದರು. ಅದರ ಪರಿಣಾಮ ಕಳೆದ ಬಾರಿ ನಡೆದ 2623 ಅಭ್ಯಾರ್ಥಿಗಳ ನೇಮಕಾತಿಯಲ್ಲಿ 2172 ಕನ್ನಡಿಗರು ಆಯ್ಕೆಯಾಗಲು ಸಾಧ್ಯವಾಯಿತು.

ಈ ವೇದಿಕೆ ಐಸಿಐಸಿಐ ಬ್ಯಾಂಕ್ ನೇಮಕಾತಿ ಪ್ರಾಧಿಕಾರವನ್ನೂ ಭೇಟಿ ಮಾಡಿದೆ. ಬ್ಯಾಂಕಿನಿಂದ ತನ್ನ ಜಿಲ್ಲಾ ಹಾಗೂ ತಾಲ್ಲೂಕು ಶಾಖೆಗಳಲ್ಲಿ ಸಂಪೂರ್ಣ ಕನ್ನಡಿಗರಿಗೆ ಆದ್ಯತೆ ನೀಡುವ ಭರವಸೆಯನ್ನೂ ಪಡೆದಿದೆ.

ಇಲ್ಲಿ ಕನ್ನಡಿಗರು ಯಾರು ಎಂಬ ಪ್ರಶ್ನೆ ಉದ್ಭವವಾಗುವುದು ಸಹಜ. ಸರೋಜಿನಿ ಮಹಿಷಿ ವರದಿ ಪ್ರಕಾರವೇ ರಾಜ್ಯದಲ್ಲಿ ಕನಿಷ್ಠ 15 ವರ್ಷ ನೆಲೆಸಿದ್ದು, ಕನ್ನಡ ಬರಹ– ಓದು ಅರಿತಿದ್ದರೆ ಅವರನ್ನು ಕನ್ನಡಿಗರು ಎಂದೇ ಪರಿಗಣಿಸಬೇಕು. ಇದನ್ನೇ ವೇದಿಕೆಯೂ ಒತ್ತಿ ಹೇಳುತ್ತದೆ.

ವೇದಿಕೆ ಈಗ ತನ್ನ ದೃಷ್ಟಿಯನ್ನು ಖಾಸಗಿ ಕ್ಷೇತ್ರದತ್ತ ಹರಿಸಿದೆ. ಅದರಲ್ಲೂ ಐಟಿ ಕ್ಷೇತ್ರದಲ್ಲಿ ಕನ್ನಡಿಗರ ಉದ್ಯೋಗದ ಹಕ್ಕನ್ನು ಅದು ಸ್ಥಾಪಿಸಬೇಕಿದೆ. ಅದರ ಸಮೀಕ್ಷೆಯ ಪ್ರಕಾರ ಕೆಲವೊಂದು ಐಟಿ ಸಂಸ್ಥೆಗಳಲ್ಲಿ ಕನ್ನಡಿಗರು ಪರಕೀಯ ಮನೋಭಾವದಿಂದ ಕೀಳರಿಮೆಯನ್ನು ಅನುಭವಿಸುತ್ತಿದ್ದಾರೆ. ಅಂಥವರಲ್ಲಿ ಸ್ವಾಭಿಮಾನ ಮೂಡಿಸುವ ಜೊತೆಗೆ ಐಟಿ ಕಂಪೆನಿಗಳಲ್ಲಿ ಕನ್ನಡಿಗರ ಪ್ರಮಾಣವನ್ನು ಹೆಚ್ಚಿಸಬೇಕು. ಕರ್ನಾಟಕ ಸರ್ಕಾರದಿಂದ ಮೂಲಭೂತ ಸೌಲಭ್ಯಗಳ ಜೊತೆಗೆ ತೆರಿಗೆ ವಿನಾಯಿತಿಯನ್ನೂ ಪಡೆಯುವ ಐಟಿ ಸಂಸ್ಥೆಗಳು ಕನ್ನಡಿಗರಿಗೆ ಉದ್ಯೋಗದಲ್ಲಿ ಆದ್ಯತೆ ನೀಡುವುದು ಕಡ್ಡಾಯವಾಗಬೇಕು. ರಾಜ್ಯದ ಎಲ್ಲಾ ಖಾಸಗಿ ಕಂಪೆನಿಗಳು ಕನ್ನಡಿಗರ ಕೃಷಿ ಭೂಮಿ, ಕನ್ನಡಿಗರಿಗೆ ಸಿಗಬೇಕಾದ ನೀರು, ವಿದ್ಯುತ್ತನ್ನು ಪಡೆಯುತ್ತವೆ. ಅಂದರೆ ಅದು ಕನ್ನಡಿಗನ ಸ್ವತ್ತಿನ ಒಂದು ಭಾಗ ಅಂದ ಮೇಲೆ ಅಲ್ಲಿ ಉದ್ಯೋಗ ಕೇಳುವುದು ಕನ್ನಡಿಗರ ಹಕ್ಕು ಎನ್ನುವುದನ್ನು ವೇದಿಕೆ ಬಲವಾಗಿ ಸಮರ್ಥಿಸುತ್ತದೆ.

ಬಹುತೇಕ ಖಾಸಗಿ ಸಂಸ್ಥೆಗಳಲ್ಲಿ ಉನ್ನತ ಅಧಿಕಾರಿಗಳ ನಿರ್ದೇಶನದಂತೆಯೇ ನೇಮಕಾತಿ ನಡೆಯುತ್ತವೆ. ಕನ್ನಡಿಗರು ನಿರ್ಣಾಯಕ ಸ್ಥಾನದಲ್ಲಿ ಇಲ್ಲದ ಕಾರಣ ಅಲ್ಲಿ ಕನ್ನಡಿಗರಿಗೆ ಅನ್ಯಾಯವಾಗುತ್ತದೆ ಎನ್ನುವುದು ವೇದಿಕೆಯ ಆಕ್ಷೇಪ. ■



ಸರೋಜಿನಿ ಮಹಿಷಿ ವರದಿ ಅನುಷ್ಠಾನದ ಕಾವಲು ಪಡೆಯಂತೆ ಕೆಲಸ ಮಾಡಲು ಅಸ್ತಿತ್ವಕ್ಕೆ ಬಂದ ಕನ್ನಡ ಅಭಿವೃದ್ಧಿ ಪ್ರಾಧಿಕಾರ ತನ್ನ ಉದ್ದೇಶಿತ ಕಾರ್ಯವನ್ನು ಸಮರ್ಪಕವಾಗಿ ಮಾಡುವಲ್ಲಿ ವಿಫಲವಾಗಿದೆ. ಕನ್ನಡಿಗರ ಉದ್ಯೋಗದ ಹಕ್ಕು ರಕ್ಷಣೆಗಾಗಿಯೇ 'ಕನ್ನಡಿಗರ ಉದ್ಯೋಗ ವೇದಿಕೆ' ಹೋರಾಟದ ಕಣಕ್ಕಿಳಿದಿದೆ.

-ವಿನುತಾ, ಅಧ್ಯಕ್ಷೆ
ಕನ್ನಡಿಗರ ಉದ್ಯೋಗ ವೇದಿಕೆ